**ದಿನಾಂಕಃ 18.12.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ವೈ ಆರ್ ಕೆ ವಕೀಲರಿಂದಃ**

ಆಧಾರ್ ಕಾರ್ಡ್ ಪ್ರತಿ ಹಾಜರು ಪಡಿಸಿದ್ದು ನಿಪಿ-13 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಬಿ ಐ ವಕೀಲರಿಂದಃ**

ನಾನು ಈ ದಿನ ನ್ಯಾಯಾಲಯಕ್ಕೆ ಖುದ್ದಾಗಿ ಬೇರೆಯವರ ಸಹಾಯವಿಲ್ಲದೇ ಬಂದಿರುತ್ತೇನೆ. 2016 ರಲ್ಲಿ ಅಪಘಾತವಾಗಿದ್ದು 2023 ರಲ್ಲಿ ಈ ಅರ್ಜಿ ಸಲ್ಲಿಸಿದ್ದು ಇಷ್ಟು ತಡವಾಗಿ ದೂರು ಸಲ್ಲಿಸಲು ಕಾರಣವನ್ನು ಅರ್ಜಿಯಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ಎಲ್ಲಾ ವ್ಯವಹರಣೆಯನ್ನು ನನ್ನ ಅಣ್ಣ ಮಾಡುತ್ತಿದ್ದು ನನಗೆ ಹೆಚ್ಚಿನ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಎತ್ತಿನ ಗಾಡಿಯಲ್ಲಿ ನಾನು ನನ್ನ ಅಣ್ಣ , ನನ್ನ ಅಪ್ಪ ಮತ್ತು ಹನುಮಕ್ಕ ಎನ್ನುವವರು ಹೋಗುತ್ತಿದ್ದೆವು . ಎತ್ತಿನ ಗಾಡಿ ಯಾರಿಗೆ ಸೇರಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಎತ್ತಿನಗಾಡಿಗೆ ಅಳವಡಿಸಿದ್ದ ರಾಗಿ ಮಿಷನ್ ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತದ ಸ್ಥಳ ವಿ ವಿ ಪುರ ರಸ್ತೆ ಎಂದರೆ ನಿಜ. ಎತ್ತಿನಗಾಡಿಯನ್ನು ರಸ್ತೆಯ ಮಧ್ಯಭಾಗದಲ್ಲಿ ನಿಲ್ಲಿಸಿದ್ದರಿಂದ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಎತ್ತಿನ ಗಾಡಿ ನಿಧಾನವಾಗಿ ರಸ್ತೆಯ ಎಡಭಾಗದಲ್ಲಿ ಹೋಗುತಿತ್ತು ಎಂದು ನುಡಿಯುುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋಗಿಲ್ಲ.

ಆಸ್ಪತ್ರೆಯಲ್ಲಿ ಎಂ ಎಲ್ ಸಿ ಬರೆಸಿರುವ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ. ಅಪಘಾತದಿಂದ ನನಗೆ ಮೂಳೆ ಮುರಿತವಾಗಿದ್ದು ಮೊದಲು ಹಿರಿಯೂರಿನಲ್ಲಿ ಚಿಕಿತ್ಸೆ ಪಡೆದು ನಂತರ ದಾವಣಗೆರೆಯ ಮಾನ್ಯ ಆಸ್ಪತ್ರೆಗೆ ಹೋಗಿರುತ್ತೇನೆ. ನನಗೆ ಯಾವುದೇ ಗಾಯಗಳು ಆಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಕೂಲಿ ಕೆಲಸ ಮಾಡಲು ಯಾವುದೇ ದಾಖಲೆಗಳು ಸಿಗುವುದಿಲ್ಲ ಎಂದು ನುಡಿಯುತ್ತಾರೆ. ಟಾಟಾ ಏಸ್ ವಾಹನದ ಚಾಲಕನಿಗೆ ಚಾಲನಾ

PW:2

ಪರವಾನಿಗೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ವಿಮಾ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು